Conversion Order

ಕರ್ನಾಟಕ ಸರ್ಕಾರ
ಕಂದಾಯ ಇಲಾಖೆ

**ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಯವರ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

ಫ್ಯಾಕ್ಸ್ 080-22860220 ದೂರವಾಣಿ ಸಂ 080-22860412 ಇ-ಮೇಲ್ deo-bangalorer2@gmail.com

ಸಂ:ಎಎಲ್ಎನ್(ಹೊ.ಅ)ಎಸ್ಆರ್/35/2014-15 ದಿನಾಂಕ 24-02-2016.

## ಅಧಿಕೃತ ಜ್ಞಾಪನ

ವಿಷಯ: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ಅನುಗೊಂಡನಹಳ್ಳಿ ಹೋಬಳಿಯ ಸಮೇತನಹಳ್ಳಿ ಗ್ರಾಮದ ಸ.ನಂ.57/2ರಲ್ಲಿ 2-30 ಎಕರೆ ವಿಸ್ತೀರ್ಣದ ಜಮೀನನ್ನು ವಾಸದ ಉದ್ದೇಶಕ್ಕಾಗಿ ಭೂಪರಿವರ್ತನೆ ಆದೇಶ ಕೋರಿರುವ ಬಗ್ಗೆ.

ಉಲ್ಲೇಖ:
1) ಶ್ರೀ.ಆರ್.ರುದ್ರಾಧ್ಯ, ಡಿ.ಬಸವರಾಜು, ಶ್ರೀ.ಡಿ.ನಂಜುಂಡಪ್ಪ, ಶ್ರೀ.ಡಿ.ಚಂದ್ರಶೇಖರ್, ಶ್ರೀ.ಡಿ.ನೀಲಕಂಠಪ್ಪ, ಶ್ರೀ.ಡಿ.ಶಿವರುದ್ರಪ್ಪ, ಶ್ರೀ.ಡಿ.ಶಿವಶಂಕರ್ ಬಿನ್ ಲೇ॥ ದೇವಿರಪ್ಪ, ಸಮೇತನಹಳ್ಳಿ ಗ್ರಾಮ, ಅನುಗೊಂಡನಹಳ್ಳಿ ಹೋಬಳಿ, ಹೊಸಕೋಟೆ ತಾಲ್ಲೂಕು. ರವರ ಅರ್ಜಿ ದಿನಾಂಕ 07-11-2014
2) ತಹಶೀಲ್ದಾರ್, ಹೊಸಕೋಟೆ ತಾಲ್ಲೂಕು ರವರ ಪತ್ರ ಸಂಖ್ಯೆ:ಎಎಲ್ಎನ್/ಹೆಚ್ಎ/ಸಿಆರ್/38/2014-15, ದಿನಾಂಕ 04-04-2015
3) ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ ರವರ ಪತ್ರ ಸಂ:ಹೊಯೋಪ್ರಾ/ಭೂಪಅ/347/14-15, ದಿನಾಂಕ 29-12-2014.
4) ಭೂಪರಿವರ್ತನಾ ಶುಲ್ಕ ವಾಸದ ಉದ್ದೇಶಕ್ಕೆ ರೂ.1,49,710/-ಗಳು ಪೋಡಿ ಶುಲ್ಕ ರೂ.65/- ಸೇರಿ ರೂ.1,49,775/-ಗಳನ್ನು ಚಲನ್ ನಂ:00053 ದಿನಾಂಕ 16-02-2016ರಂದು ಎಸ್.ಬಿ.ಎಂ. ಹೊಸಕೋಟೆ ಶಾಖೆಗೆ ಜಮಾ ಮಾಡಲಾಗಿದೆ.
5) ಸರ್ಕಾರದ ಸುತ್ತೋಲೆ ಸಂಖ್ಯೆ:ಆರ್‌ಡಿ 7 ಎಲ್‌ಜಿಪಿ 95, ದಿನಾಂಕ 07-06-1999.
6) ಸರ್ಕಾರದ ಸುತ್ತೋಲೆ ಸಂ:ಆರ್‌ಡಿ 56 ಎಲ್‌ಜಿಪಿ 2008, ದಿನಾಂಕ 10-09-2008.
7) ಸರ್ಕಾರದ ಪತ್ರ ಸಂಖ್ಯೆ:ಆರ್‌ಡಿ 100 ಎಲ್‌ಜಿಪಿ 2009, ದಿನಾಂಕ 18-02-2010.

ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 95(2), 95(4) ಮತ್ತು 95(7)ರ ಷರತ್ತುಗಳು ಹಾಗೂ ಈ ಕೆಳಕಾಣಿಸಿದ ಷರತ್ತುಗೊಳಪಡಿಸಿ, ಕರ್ನಾಟಕ ಭೂಕಂದಾಯ (ತಿದ್ದುಪಡಿ) ನಿಯಮಗಳು 1994ರ ನಿಯಮ 107(1)ರಂತೆ ವಾಸದ ಉದ್ದೇಶಕ್ಕೆ ಎಕರೆ ಒಂದಕ್ಕೆ ರೂ.54,440/-ಗಳು (ರೂಪಾಯಿಗಳು ಐವತ್ತಾ ನಾಲ್ಕು ಸಾವಿರದ ನಾಲ್ಕು ನೂರಾ ನಲವತ್ತು)ರಂತೆ ಅರ್ಜಿದಾರರು ಉಲ್ಲೇಖ(4)ರ ಚಲನ್‌ನಲ್ಲಿ ನಮೂದಿಸಿರುವಂತೆ ಭೂಪರಿವರ್ತನಾ ಶುಲ್ಕವನ್ನು ಜಮಾ ಮಾಡಿದ ಮೇರೆಗೆ ಅರ್ಜಿದಾರರ ಅರ್ಜಿಯನ್ನು ಪರಿಗಣಿಸಿ ಹೊಸಕೋಟೆ ತಾಲ್ಲೂಕಿನ ಅನುಗೊಂಡನಹಳ್ಳಿ ಹೋಬಳಿಯ ಸಮೇತನಹಳ್ಳಿ ಗ್ರಾಮದ ಸ.ನಂ.57/2ರಲ್ಲಿ 2-30 ಎಕರೆ ವಿಸ್ತೀರ್ಣದ ಜಮೀನನ್ನು ವಾಸದ ಉದ್ದೇಶಕ್ಕೆ ಬಳಸಲು ಈ ಕೆಳಕಾಣಿಸಿದ ಷರತ್ತುಗಳಿಗೆ ಒಳಪಟ್ಟು ಉಲ್ಲೇಖ(5) ಮತ್ತು (6)ರ ಸುತ್ತೋಲೆಗಳ ಸೂಚನೆಗಳಂತೆ ಮತ್ತು ಉಲ್ಲೇಖ(7)ರ ಪತ್ರದಂತೆ ಈ ಭೂಪರಿವರ್ತನಾ ಆದೇಶವನ್ನು ಹೊರಡಿಸಲಾಗಿದೆ.

1. ಈ ಭೂಮಿಯು ಯಾವ ಉದ್ದೇಶಕ್ಕಾಗಿ ಪರಿವರ್ತನೆಯಾಗಿದೆಯೋ ಆ ಉದ್ದೇಶಕ್ಕೆ ಉಪಯೋಗಿಸಿ ಕೊಳ್ಳಲು ಸಕ್ಷಮ ಪ್ರಾಧಿಕಾರದಿಂದ ಅಂದರೆ, ಹೊಸಕೋಟೆ ಯೋಜನಾ ಪ್ರಾಧಿಕಾರ ಮತ್ತು ಸಂಬಂಧಿಸಿದ ಗ್ರಾಮ ಪಂಚಾಯಿತಿಯಿಂದ ಮಂಜೂರಾತಿಯನ್ನು ಪಡೆಯದ ಹೊರತು ಈ ಆದೇಶವು ಅನುಭವದಾರನಿಗೆ ಯಾವುದೇ ಹಕ್ಕನ್ನು ನೀಡುವುದಿಲ್ಲ.
2. ಈ ಭೂಪರಿವರ್ತಿತ ಜಮೀನನ್ನು ವಾಸದ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸಿ ಕೊಳ್ಳತಕ್ಕದ್ದು. ಈ ಜಮೀನನ್ನು ಪೂರ್ವಾನುಮತಿ ಇಲ್ಲದೆ ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿ ಕೊಳ್ಳಬಾರದು.
3. ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ ರವರಿಂದ ಒಂದು ವರ್ಷದೊಳಗಾಗಿ ನಕ್ಷೆ ಅನುಮೋದನೆ ಪಡೆಯುವುದು. ಸದರಿ ಜಮೀನಿನಲ್ಲಿ ಯೋಜನಾ ನಕ್ಷೆ ಅನುಮೋದನೆ ಪಡೆಯದೆ ಪರಭಾರೆ ಮಾಡಕೂಡದು.
4. ಇತರೆ ಅವಶ್ಯಕವಾದ ರಸ್ತೆ, ಜಾಗ, ರಸ್ತೆ ಮಾರ್ಜಿನ್, ನಾಗರೀಕ ಸೌಲಭ್ಯ / ಪಾರ್ಕ್ ಇತ್ಯಾದಿಗಳನ್ನು ಹೊಸಕೋಟೆ ಯೋಜನಾ ಪ್ರಾಧಿಕಾರದಿಂದ ಅನುಮೋದಿಸಿದ ಬಡಾವಣೆ ನಕ್ಷೆ ಪ್ರಕಾರ ಹಾಗೂ ನಿರ್ದಿಷ್ಟಪಡಿಸಿದ ನಿಯಮಗಳ ರೀತ್ಯಾ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು.
5. ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ಜಮೀನಿನಲ್ಲಿ ನಾಗರೀಕ ಸೌಲಭ್ಯಗಳಾದ ವಿದ್ಯುಚ್ಛಕ್ತಿ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ ಇತ್ಯಾದಿಗಳನ್ನು ಆರೋಗ್ಯ ನೈರ್ಮಲ್ಯೀಕರಣ ಹಾಗೂ ಭದ್ರತೆಗಳ ಉದ್ದೇಶದಿಂದ ಎಲ್ಲಾ ಸೌಲಭ್ಯಗಳನ್ನು ಕಾನೂನಿನಂತೆ ಒದಗಿಸಿ ಕೊಡುವುದು ಅರ್ಜಿದಾರರ ಜವಾಬ್ದಾರಿಯಾಗಿರುತ್ತದೆ.
6. ಸಮೇತನಹಳ್ಳಿ ಗ್ರಾಮದ ಸ.ನಂ.57/2ರಲ್ಲಿ ಯಾವುದೇ ಖರಾಬು ಇರುವುದಿಲ್ಲ.

7. ಸರ್ಕಾರದ ಆದೇಶದ ಸಂಖ್ಯೆ:ಪಿಡಬ್ಲ್ಯುಡಿ.7556-665-ಆರ್ ಮತ್ತು ಬಿ-6-54-5 ಮತ್ತು ಕೇಂದ್ರ ಸರ್ಕಾರದ ಸಾರಿಗೆ ಇಲಾಖೆಯ ಪತ್ರದ ನಂ:ಪಿ.1:7(11)67, ದಿನಾಂಕ:01.01.1966ರಂತೆ ಈ ಜಮೀನಿನಲ್ಲಿ ಕಟ್ಟಲು ಉದ್ದೇಶಿಸಿರುವ ಕಟ್ಟಡಕ್ಕೂ ರಾಷ್ಟ್ರೀಯ ಹೆದ್ದಾರಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ 40 ಮೀಟರುಗಳ ಅಂತರವನ್ನು ಮತ್ತು ಜಿಲ್ಲಾ ಹೆದ್ದಾರಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ 25 ಮೀಟರ್‌ಗಳನ್ನು ಕಾಯ್ದಿರಿಸಬೇಕು ಹಾಗೂ ಈ ಖಾಲಿ ಪ್ರದೇಶದಲ್ಲಿ ಯಾವುದೇ ಕಟ್ಟಡವನ್ನು ಕಟ್ಟಬಾರದು.
8. ಈ ಜಮೀನಿನಲ್ಲಿ ನಾಗರೀಕ ಸೌಲಭ್ಯ ನಿವೇಶನ ಹಾಗೂ ಉದ್ಯಾನವನಕ್ಕೆ ಕಾಯ್ದಿರಿಸಿರುವ ಸ್ಥಳಗಳನ್ನು ಒಂದೇ ಬ್ಲಾಕ್‌ನಲ್ಲಿ ಬಿಡತಕ್ಕದ್ದು,
9. ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ ರವರ ಪತ್ರ ಸಂ:ಹೊಯೋಪ್ರಾ/ಭೂಪಅ/347/14-15, ದಿನಾಂಕ 29-12-2014ರಲ್ಲಿ ವಿಧಿಸಿರುವ ಎಲ್ಲಾ ಷರತ್ತುಗಳನ್ನು ಅರ್ಜಿದಾರರು ಕಡ್ಡಾಯವಾಗಿ ಪಾಲಿಸತಕ್ಕದ್ದು.
10. ಭೂಪರಿವರ್ತನೆಯಾದ ಜಮೀನನ್ನು ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರದಿಂದ ಅದೇ ಉದ್ದೇಶಕ್ಕಾಗಿ ಅನುಮೋದಿತ ನಕ್ಷೆ ಪಡೆಯುವ ಮೊದಲು ಗಣಕೀಕೃತ ಪಹಣಿಯಲ್ಲಿ **ಭೂಪರಿವರ್ತನೆ** ಎಂದು ನಮೂದಿಸತಕ್ಕದ್ದು.
11. ಪರಿವರ್ತಿತ ಜಮೀನಿನ ಸುತ್ತಲೂ ಇರುವ ಜಮೀನು / ಬಡಾವಣೆಗಳಿಗೆ ರಸ್ತೆ ಸಂಪರ್ಕವನ್ನು ಕಡ್ಡಾಯವಾಗಿ ಒದಗಿಸುವುದು.
12. ಯಾವುದೇ ನ್ಯಾಯಾಲಯಗಳಲ್ಲಿ ಪ್ರಕರಣ / ದಾವೆಗಳು ಇದ್ದಲ್ಲಿ ಅದರ ಅಂತಿಮ ಆದೇಶಕ್ಕಾಗಿ ಸದರಿ ಭೂಪರಿವರ್ತನೆ ಆದೇಶವು ಒಳಪಟ್ಟಿರುತ್ತದೆ.
13. ಯಾವುದೇ ಮುಂದಿನ ಅಭಿವೃದ್ಧಿ ಕಾರ್ಯಕೈಗೊಳ್ಳುವ ಮೊದಲು ಸದರಿ ಆದೇಶಂತೆ ಪಹಣಿಯಲ್ಲಿ ಭೂಪರಿವರ್ತನೆ ಎಂದು ನಮೂದಿಸಲು ಕ್ರಮಕೈಗೊಳ್ಳತಕ್ಕದ್ದು
14. ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಅಥವಾ ಸುಳ್ಳು / ಸೃಷ್ಟಿತ ದಾಖಲೆ ಮಾಹಿತಿ ಸಲ್ಲಿಸಿದ್ದಲ್ಲಿ ಈ ಭೂಪರಿವರ್ತನೆ ಆದೇಶ ಯಾವುದೇ ಸೂಚನೆ ನೀಡದೆ ರದ್ದುಗೊಳಿಸಲಾಗುವುದು ಮತ್ತು ಕರ್ನಾಟಕ ಭೂಕಂದಾಯ ಕಾಯಿದೆ 1964ರ ಕಲಂ 96ರಂತೆ ದಂಡ ಶುಲ್ಕವನ್ನು ವಿಧಿಸಲು ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು. ಅಲ್ಲದೆ ಈ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಿದ ಕಟ್ಟಡಗಳನ್ನು ಯಾವುದೇ ಪರಿಹಾರ ನೀಡದೆ ಕೆಡವಲು ಕ್ರಮ ತೆಗೆದುಕೊಳ್ಳಲಾಗುವುದು ಹಾಗೂ ಅದಕ್ಕೆ ತಗಲುವ ವೆಚ್ಚವನ್ನು ಭೂ ಕಂದಾಯ ಬಾಕಿ ಎಂದು ಖಾತೇದಾರರಿಂದ ವಸೂಲಿ ಮಾಡಲಾಗುವುದು.

<u>ಷೆಡ್ಯೂಲ್</u>

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ಅನುಗೊಂಡನಹಳ್ಳಿ ಹೋಬಳಿಯ ಸಮೇತನಹಳ್ಳಿ ಗ್ರಾಮದ ಸ.ನಂ.57/2ರಲ್ಲಿ 2-30 ಎಕರೆ ವಿಸ್ತೀರ್ಣದ ಜಮೀನನ್ನು ವಾಸದ ಉದ್ದೇಶಕ್ಕಾಗಿ ಭೂಪರಿವರ್ತಿತ ಜಮೀನಿಗೆ ಚಕ್ಕುಬಂದಿ.

| ಸ.ನಂ. | ವಿಸ್ತೀರ್ಣ (ನಕ್ಷೆಯಂತೆ) | ಪೂರ್ವಕ್ಕೆ | ಪಶ್ಚಿಮಕ್ಕೆ | ಉತ್ತರಕ್ಕೆ | ದಕ್ಷಿಣಕ್ಕೆ |
|---|---|---|---|---|---|
| 57/2 | 2-30 ಎಕರೆ | ಸ.ನಂ.57/1ರ ಜಮೀನು | ರಸ್ತೆ | ಸ.ನಂ.36ರ ಜಮೀನು | ಸ.ನಂ.57/1ರ ಜಮೀನು |

ಸಹಿ/-
ಜಿಲ್ಲಾಧಿಕಾರಿ,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

<u>ಪ್ರತಿಯನ್ನು:</u>

1. ಪ್ರಾದೇಶಿಕ ಆಯುಕ್ತರು, ಕಂದಾಯ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
2. ತಹಶೀಲ್ದಾರರು, ಹೊಸಕೋಟೆ ತಾಲ್ಲೂಕು ರವರಿಗೆ ಮೂಲ ಕಡತ ಹಾಗೂ ಚಲನ್‌ನೊಂದಿಗೆ ಕಳುಹಿಸುತ್ತಾ ಆದೇಶದ ಪ್ರಕಾರ ಸಂಬಂಧಪಟ್ಟ ಸ.ನಂ. ಭೂಪರಿವರ್ತನೆಯಾಗಿದೆ ಎಂದು ಸಂಬಂಧಪಟ್ಟ ಪಹಣಿಯಲ್ಲಿ ಪೋಡಿ-ದುರಸ್ತಿಪಡಿಸಿ ನಮೂದಿಸತಕ್ಕದ್ದು ಮತ್ತು ಈ ಜಮೀನಿಗೆ ಖಾತೆದಾರರ ಲೆಕ್ಕದಲ್ಲಿ ಸದರಿ ಜಮೀನಿನ ಭೂ ಕಂದಾಯವನ್ನು ಕಡಿಮೆಗೊಳಿಸುವುದು.
3. ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ,
4. ಉಪವಿಭಾಗಾಧಿಕಾರಿ, ದೊಡ್ಡಬಳ್ಳಾಪುರ ಉಪವಿಭಾಗ, ದೊಡ್ಡಬಳ್ಳಾಪುರ
5. ಉಪನಿರ್ದೇಶಕರು, ಭೂಮಾಪನ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
6. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸಮೇತನಹಳ್ಳಿ ಗ್ರಾಮ ಪಂಚಾಯಿತಿ, ಹೊಸಕೋಟೆ ತಾಲ್ಲೂಕು
7. ಶ್ರೀ:ಆರ್.ರುದ್ರಾರಾಧ್ಯ, ಡಿ.ಬಸವರಾಜು, ಶ್ರೀ.ಡಿ.ನಂಜುಂಡಪ್ಪ, ಶ್ರೀ.ಡಿ.ಚಂದ್ರಶೇಖರ್, ಶ್ರೀ.ಡಿ.ನೀಲಕಂಠಪ್ಪ, ಶ್ರೀ.ಡಿ.ಶಿವರುದ್ರಪ್ಪ, ಶ್ರೀ.ಡಿ.ಶಿವಶಂಕರ್ ಬಿನ್ ಲೇ॥ ದೇವಿರಪ್ಪ, ಸಮೇತನಹಳ್ಳಿ ಗ್ರಾಮ, ಅನುಗೊಂಡನಹಳ್ಳಿ ಹೋಬಳಿ, ಹೊಸಕೋಟೆ ತಾಲ್ಲೂಕು.
8. ಕಛೇರಿ ಪ್ರತಿಗಳು

ಜಿಲ್ಲಾಧಿಕಾರಿಯವರ ಪರವಾಗಿ,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

Conv Fee Recd Immediately

ಕರ್ನಾಟಕ ಸರ್ಕಾರ
ಕಂದಾಯ ಇಲಾಖೆ

**ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಯವರ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

ಫ್ಯಾಕ್ಸ್ 080-22860220 ದೂರವಾಣಿ 080-22860412 ಇ-ಮೇಲ್ deo-bangalorer1@gmail.com

ನಂ.ಎಎಲ್‌ಎನ್(ಹೆಚ್.ಎ.)ಎಸ್‌ಆರ್/35/14-15 ದಿನಾಂಕ 15-02-2016.

ಅನುಬಂಧ-3

**ತಿಳುವಳಿಕೆ**

ವಿಷಯ: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ಅನುಗೊಂಡನಹಳ್ಳಿ ಹೋಬಳಿಯ ಸಮೇತನಹಳ್ಳಿ ಗ್ರಾಮದ ಸ.ನಂ.57/2ರಲ್ಲಿ 2-30 ಎಕರೆ ವಿಸ್ತೀರ್ಣದ ಜಮೀನನ್ನು ವಾಸದ ಉದ್ದೇಶಕ್ಕೆ ಭೂಪರಿವರ್ತನೆ ಆದೇಶ ಕೋರಿರುವ ಬಗ್ಗೆ.

ಶ್ರೀ.ಆರ್.ರುದ್ರರಾಧ್ಯ, ಡಿ.ಬಸವರಾಜು, ಶ್ರೀ.ಡಿ.ನಂಜುಂಡಪ್ಪ, ಶ್ರೀ.ಡಿ.ಚಂದ್ರಶೇಖರ್, ಶ್ರೀ.ಡಿ.ನೀಲ ಕಂಠಪ್ಪ, ಶ್ರೀ.ಡಿ.ಶಿವರುದ್ರಪ್ಪ, ಶ್ರೀ.ಡಿ.ಶಿವಶಂಕರ್ ಬಿನ್ ಲೇ॥ ದೇವಿರಪ್ಪ, ಸಮೇತನಹಳ್ಳಿ ಗ್ರಾಮ, ಅನುಗೊಂಡನಹಳ್ಳಿ ಹೋಬಳಿ, ಹೊಸಕೋಟೆ ತಾಲ್ಲೂಕು ಆದ ನಿಮಗೆ ಈ ಮೂಲಕ ತಿಳಿಸುವುದೇನೆಂದರೆ, ನೀವು ಹೊಸಕೋಟೆ ತಾಲ್ಲೂಕಿನ ಅನುಗೊಂಡನಹಳ್ಳಿ ಹೋಬಳಿಯ ಸಮೇತನಹಳ್ಳಿ ಗ್ರಾಮದ ಸ.ನಂ.57/2ರಲ್ಲಿ 2-30 ಎಕರೆ ವಿಸ್ತೀರ್ಣದ ಜಮೀನನ್ನು ವಾಸದ ಉದ್ದೇಶಕ್ಕಾಗಿ ಭೂಪರಿವರ್ತನೆ ಮಾಡಲು ಕೋರಿ ಸಲ್ಲಿಸಿರುವ ಅರ್ಜಿಯನ್ನು ಪರಿಶೀಲಿಸಲಾಗಿರುತ್ತದೆ. ಹಾಗೂ ಈ ಬಾಬ್ತು ಈ ಕೆಳಗೆ ನಮೂದಿಸಿರುವ ಭೂಪರಿವರ್ತನಾ ಶುಲ್ಕವನ್ನು ಮತ್ತು ಪೋಡಿ ಶುಲ್ಕವನ್ನು ಸರ್ಕಾರಕ್ಕೆ ಜಮಾ ಮಾಡಿ; ಈ ತಿಳುವಳಿಕೆ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ರೂ.100.00 (ರೂಪಾಯಿಗಳು ಒಂದು ನೂರು ಮಾತ್ರ) ಛಾಪಾ ಕಾಗದದಲ್ಲಿ ಕರಾರು ಪತ್ರದೊಂದಿಗೆ ಚಲನ್/ಡಿ.ಡಿ.ಅನ್ನು 15 ದಿವಸಗಳೊಳಗಾಗಿ ಹಾಜರುಪಡಿಸಿ ಭೂಪರಿವರ್ತನಾ ಮಂಜೂರಾತಿ ಆದೇಶವನ್ನು ಪಡೆಯತಕ್ಕದ್ದು.

ನಿಗದಿಪಡಿಸಿದ ಅವಧಿಯಲ್ಲಿ ಭೂಪರಿವರ್ತನೆ ಶುಲ್ಕ ಪಾವತಿಸಿದ ಚಲನ್/ಡಿ.ಡಿ. ಮತ್ತು ಕರಾರು ಪತ್ರವನ್ನು ಹಾಜರುಪಡಿಸದಿದ್ದಲ್ಲಿ ನಿಮ್ಮ ಅರ್ಜಿಯನ್ನು ತಿರಸ್ಕರಿಸಲಾಗುವುದು.

| ಸ.ನಂ. | ವಿಸ್ತೀರ್ಣ ಎಕರೆ/ಗುಂಟೆ | ಹಣ ಪಾವತಿಯ ವಿವರ | ಮೊಬಲಗು ರೂ. ಪೈ. |
|---|---|---|---|
| 57/2 | 2-30 ಎಕರೆ | 1. ಭೂಪರಿವರ್ತನೆ ಶುಲ್ಕ ಎಕರೆ ಒಂದಕ್ಕೆ ರೂ.54,440/-ರಂತೆ ವಾಸದ ಉದ್ದೇಶಕ್ಕೆ | 1,49,710.00 |
| | | 2. ಪೋಡಿ ಶುಲ್ಕ | 65.00 |
| | 2-30 ಎಕರೆ | ಒಟ್ಟು | **1,49,775.00** |

(ರೂ. ಒಂದು ಲಕ್ಷದ ನಲವತ್ತೊಂಭತ್ತು ಸಾವಿರದ ಏಳು ನೂರ ಎಪ್ಪತ್ತೈದು ಮಾತ್ರ)

13/2.

ಅಪರ ಜಿಲ್ಲಾಧಿಕಾರಿ,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಗೆ,

ಶ್ರೀ.ಆರ್.ರುದ್ರರಾಧ್ಯ, ಡಿ.ಬಸವರಾಜು, ಶ್ರೀ.ಡಿ.ನಂಜುಂಡಪ್ಪ,
ಶ್ರೀ.ಡಿ.ಚಂದ್ರಶೇಖರ್, ಶ್ರೀ.ಡಿ.ನೀಲಕಂಠಪ್ಪ, ಶ್ರೀ.ಡಿ.ಶಿವರುದ್ರಪ್ಪ,
ಶ್ರೀ.ಡಿ.ಶಿವಶಂಕರ್ ಬಿನ್ ಲೇ॥ ದೇವಿರಪ್ಪ,
ಸಮೇತನಹಳ್ಳಿ ಗ್ರಾಮ,
ಅನುಗೊಂಡನಹಳ್ಳಿ ಹೋಬಳಿ,
ಹೊಸಕೋಟೆ ತಾಲ್ಲೂಕು

ಕರ್ನಾಟಕ ಸರ್ಕಾರ

ಕ.ಆ.ಸಂ.-೨

ಹೊಸಕೋಟೆ ನಲ್ಲಿರುವ ಎಸ್.ಬಿ.ಎಂ. ಬ್ಯಾಂಕ್/ಖಜಾನೆಯಲ್ಲಿ ಪಾವತಿಸಿದೆ

ನಗದು ಹಣದ ಚಲನ್

| ಖಜಾನೆ ಕೋಡು | | | | ಡ್ರಾ.ಅ.ಕೋಡು | | | | ದಿನಾಂಕ | | | ಚಲನ್ ನಂ. |
|---|---|---|---|---|---|---|---|---|---|---|---|
| 0 | 3 | 0 | 4 | 8 | 8 | 6 | 3 | 16 | 02 | 2016 | 28053 |

| | |
|---|---|
| ಪಾವತಿದಾರನ ಹೆಸರು | ಶ್ರೀ.ಆರ್.ರುದ್ರಾರಾಧ್ಯ, ಶ್ರೀ.ಡಿ.ಬಸವರಾಜು, ಶ್ರೀ.ಡಿ.ನಂಜುಂಡಪ್ಪ, ಶ್ರೀ.ಡಿ.ಚಂದ್ರಶೇಖರ್, ಶ್ರೀ.ಡಿ.ನೀಲಕಂಠಪ್ಪ, ಶ್ರೀ.ಡಿ.ಶಿವರುದ್ರಪ್ಪ, ಶ್ರೀ.ಡಿ.ಶಿವಶಂಕರ್ ಬಿನ್ ಲೇಟ್ ದೇವಿರಪ್ಪ |
| ವಿಳಾಸ | ಸಮೇತನಹಳ್ಳಿ ಗ್ರಾಮ, ಅನುಗೊಂಡನಹಳ್ಳಿ ಹೋಬಳಿ, ಹೊಸಕೋಟೆ ತಾಲ್ಲೂಕು. |
| ಪಾವತಿಯ ಉದ್ದೇಶ: ಸಂಖ್ಯೆ:ಎ.ಎಲ್.ಎನ್(ಹೆಚ್ಎ)ಎಸ್‌ಆರ್:35/14-15, ದಿನಾಂಕ:15-02-2016ರಂತೆ ವಾಸದ ಉದ್ದೇಶಕ್ಕಾಗಿ ಭೂಪರಿವರ್ತನೆ ಶುಲ್ಕ ಪಾವತಿಸುವ ಬಗ್ಗೆ.<br><br>ಲೆಕ್ಕದ ಬಾಬಿನ ವಿವರ: ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಸಮೇತನಹಳ್ಳಿ ಗ್ರಾಮದ ಸ.ನಂ.57/2ರಲ್ಲಿ 2-30ಎ/ಗುಂ ಜಮೀನನ್ನು ವಾಸದ ಉದ್ದೇಶಕ್ಕಾಗಿ ಭೂಪರಿವರ್ತನೆ ಕೋರಿದ್ದು ಶುಲ್ಕ ಪಾವತಿಸುವ ಬಗ್ಗೆ. | ಸರಿಯಾಗಿದೆ ಹಣ ಸ್ವೀಕರಿಸಿ<br><br>ಮೇಲು ರುಜು ಮಾಡುವ ಅಧಿಕಾರಿಯ ಸಹಿ<br>ಹೊಸಕೋಟೆ. |

| ಪಾವತಿಯ ವಿವರ | ಲೆಕ್ಕ ಶೀರ್ಷಿಕೆ ಕೋಡ್ | | | | | | | | | | | | ಮೊಬಲಗು ರೂ. |
|---|---|---|---|---|---|---|---|---|---|---|---|---|---|
| ಭೂ ಪರಿವರ್ತನೆ ಶುಲ್ಕ | 0 | 0 | 2 | 9 | 0 | 0 | 1 | 0 | 1 | 0 | 0 | 0 | 1,49,710-00 |
| 'ಎ' ಖರಾಬು ಶುಲ್ಕ | 0 | 0 | 2 | 9 | 0 | 0 | 1 | 0 | 1 | 0 | 0 | 0 | 00-0 |
| ಪೋಡಿ ಶುಲ್ಕ | 0 | 0 | 2 | 9 | 0 | 0 | 1 | 0 | 1 | 0 | 9 | 1 | 65-00 |
| ಕ.ಭೂ.ಕ-೬೪ ೯೬(೧)ರಂತೆ ದಂಡ | 0 | 0 | 2 | 9 | 0 | 0 | 1 | 0 | 1 | 0 | 0 | 0 | 00-00 |
| | ಒಟ್ಟು ಮೊತ್ತ | | | | | | | | | | | | 1,49,775-00 |

ಪದಗಳಲ್ಲಿ: ರೂ. ಒಂದು ಲಕ್ಷದ ನಲವತ್ತೊಂಭತ್ತು ಸಾವಿರದ ಏಳು ನೂರ ಎಪ್ಪತ್ತೈದು ಮಾತ್ರ/-

ತಾರೀಖು:16-02-2016

ಸ್ಥಳ: ಹೊಸಕೋಟೆ.

ಪಾವತಿದಾರನ ಸಹಿ

STATE BANK OF MYSORE / Hoskote Branch — FEB 2016 — CASH RECEIVED

ರೂ. ______________ (ಪದಗಳಲ್ಲಿ) ______________ ರೂಪಾಯಿಗಳು ಮಾತ್ರ ಸ್ವೀಕರಿಸಿದೆ.

J1278144

ಖಜಾಂಚಿ 8484 ಲೇಖಾಪಾಲ ಖಜಾನೆ/ಬ್ಯಾಂಕ್ ಅಧಿಕಾರಿ

ರವರಿಗೆ,

ಮಾನ್ಯ ಜಿಲ್ಲಾಧಿಕಾರಿಗಳು,

ಬೆಂಗಳೂರು ಗ್ರಾಮಾಂತರ ಜಿಲ್ಲೆ,

ಬೆಂಗಳೂರು.

ಇಂದ,

ಶ್ರೀ ಆರ್. ರುದ್ರಾರಾಧ್ಯ, ಶ್ರೀ ಡಿ. ಬಸವರಾಜು, ಶ್ರೀ ಡಿ. ನಂಜುಂಡಪ್ಪ, ಶ್ರೀ ಡಿ. ಚಂದ್ರಶೇಖರ್, ಶ್ರೀ ಡಿ. ನೀಲಕಂಠಪ್ಪ, ಶ್ರೀ ಡಿ. ಶಿವರುದ್ರಪ್ಪ, ಶ್ರೀ ಡಿ. ಶಿವಶಂಕರ್ ಬಿನ್ ಲೇಟ್ ದೇವಿರಪ್ಪ,

ವಾಸ : ಸಮೇತನಹಳ್ಳಿ ಗ್ರಾಮ, ಅನುಗೊಂಡನಹಳ್ಳಿ ಹೋಬಳಿ, ಹೊಸಕೋಟೆ ತಾಲ್ಲೂಕು,

ಮಾನ್ಯರೇ,

ವಿಷಯ :- ಬೆಂಗಳೂರು ಗ್ರಾಮಾಂತರ ಜಿಲ್ಲೆ, ಜಿಲ್ಲಾಧಿಕಾರಿಗಳಲ್ಲಿ ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಸಮೇತನಹಳ್ಳಿ ಗ್ರಾಮದ ಸ.ನಂ. 57/2 ರಲ್ಲಿ 2-30 ಎಕರೆ/ಗುಂಟೆ ಜಮೀನಿನ ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತನೆಗಾಗಿ ಬ್ಯಾಂಕ್‌ಗೆ ಶುಲ್ಕವನ್ನು ಪಾವತಿ ಮಾಡಿರುವ ಚಲನ್ ಮತ್ತು ಕರಾರು ಪತ್ರವನ್ನು ಸಲ್ಲಿಸುತ್ತಿರುವ ಬಗ್ಗೆ.

***

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆ, ಜಿಲ್ಲಾಧಿಕಾರಿಗಳಲ್ಲಿ ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಸಮೇತನಹಳ್ಳಿ ಗ್ರಾಮದ ಸ.ನಂ. 57/2 ರಲ್ಲಿ 2-30 ಎಕರೆ/ಗುಂಟೆ ಜಮೀನಿನ ವಸತಿ ಉದ್ದೇಶಕ್ಕಾಗಿ ಭೂಪರಿವರ್ತನೆ ಮಾಡಲು ಶುಲ್ಕವನ್ನು ಹೊಸಕೋಟೆ ಎಸ್.ಬಿ.ಎಂ. ಬ್ಯಾಂಕಿನಲ್ಲಿ ದಿನಾಂಕ 17-02-2016 ರಂದು ರೂ. 1,49,775/- ರೂ.ಗಳನ್ನು ಪಾವತಿಸಲಾಗಿದೆ. ಸದರಿ ಬ್ಯಾಂಕ್ ಚಲನ್ ಮತ್ತು ಕರಾರು ಪತ್ರವನ್ನು ಇದರೊಂದಿಗೆ ಲಗತ್ತಿಸಲಾಗಿದೆ.

ಆದುದರಿಂದ ಮೇಲ್ಕಂಡ ಜಮೀನನ್ನು ಭೂ ಪರಿವರ್ತನೆ ಮಾಡಿಕೊಡಬೇಕೆಂದು ಕೋರುತ್ತೇನೆ.

ವಂದನೆಗಳೊಂದಿಗೆ,

ಇಂತಿ, ತಮ್ಮ ವಿಶ್ವಾಸಿ,

Ru Ru
D. Basavaraj
D. Nanjunda
ಚಂದ್ರಶೇಖರ್
Neelakantappa
ಶಿವರುದ್ರಪ್ಪ
Shivashankar

ದಿನಾಂಕ : 16-02-2016